
# ಸವಾಲು




ಭಾನುವಾರ ಬೆಳಿಗ್ಗೆ
ಅವನು
ಕಣ್ತುಂಬ ನಿದ್ದೆ ಮಾಡಿ
ತಡವಾಗಿ ಎದ್ದ.

ಕಾಫ಼ಿ ಹೀರುತ್ತ, ನಿರ್ಲಿಪ್ತ
ದಿನಪತ್ರಿಕೆ ಓದಿದ.
ಸಿಗರೇಟು ಸೇದಿದ.

ಅಂಗಳದ ತೆಂಗಿನಮರಕ್ಕೆ
ನೀರೆರೆದ.
ಹೂಗಿಡಗಳ ಆರೈಕೆ ಮಾಡಿದ.
ಮಕ್ಕಳೊಂದಿಗೆ
ಕೇಕೆ ಹಾಕುತ್ತ ಆಡಿದ.

ಹೆಂಡತಿಯ ಕೈಯಿಂದ
ಎಣ್ಣೆ ತಟ್ಟಿಸಿಕೊಂಡು
ಇಡೀ ಒಂದು ಗಂಟೆ
ಅಭ್ಯಂಜನ ಮಾಡಿದ.
ಮಾಡುತ್ತ, ಎಗ್ಗಿಲ್ಲದೆ ಹಾಡಿದ.

ಚಿತ್ರಾನ್ನ, ಪಾಯಸ
ಬಾಯಿ ಚಪ್ಪರಿಸಿ ಉಂಡ.
ಹೆಂಡತಿಯ ಕೈರುಚಿ ಕೊಂಡಾಡಿದ.

ಸಂಜೆ ಸಕುಟುಂಬ
ಯಾವುದೋ ಒಂದು
ಸಿನಿಮಾ ನೋಡಿ ಬಂದ.

ರಾತ್ರಿ
ಹೆಂಡತಿಯೊಡನೆ
ಹುಮ್ಮಸ್ಸಿನಿಂದ
ಕೂಡಿದ.

ಕನಸುಗಳಿಲ್ಲದ
ಗಾಢನಿದ್ದೆಗೆ
ಸಂದ.

ಹಾಳಾದವನು
ಆವೇಳೆ
ನನ್ನ ಕವಿತೆಯಲ್ಲಿ ಬಂದು,
'ಹೇಗಿದ್ದೀಯ, ಗೆಳೆಯ?'
ಎಂದ.

● ಬಿ.ಆರ್. ಲಕ್ಷ್ಮಣರಾವ್